ಸಾಕ್ಷಿಯನ್ನು ದಿನಾಂಕಃ **27-11-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಆರ್.ಎನ್ ವಕೀಲರಿಂದಃ**

ನನ್ನ ಗಂಡನಿಗೆ ಯಾವುದೇ ಖಾಯಿಲೆ ಇಲ್ಲ. ಅವರು ಚಿಕಿತ್ಸೆಯನ್ನು ಪಡೆದುಕೊಂಡ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿದ್ದು ಇರುವುದಿಲ್ಲ. ಆರೋಪಿಯು ನಾಗಮಂಗಲ ಹಾಗೂ ಆದರ್ಶ ಆಸ್ಪತ್ರೆಯಲ್ಲಿ ಒಳರೋಗಿಯಾದ ಬಗ್ಗೆ ನಾನು ತಿಳಿದುಕೊಂಡಿದ್ದು ಇರುವುದಿಲ್ಲ. ಎದುರುದಾರನು ಬೆಂಗಳೂರಿನಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ, ಹಾಗೂ ಕಾರವಾರದಲ್ಲಿ ಖಾಯಂ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರು ಕಾರವಾರ ಮೆಡಿಕಲ್ ಸಂಸ್ಥೆಯಿಂದ
ಸುಳ್ಳು ಮೆಡಿಕಲ್ ಪ್ರಮಾಣ ಪತ್ರವನ್ನು ಪಡೆದಿದ್ದಾನೆ. ಸಾಕ್ಷಿಯು ಮುಂದುವರೆದು ಹಣ ಕೊಟ್ಟರೇ ಸುಳ್ಳು ಪ್ರಮಾಣ ಪತ್ರವನ್ನು ಪಡೆಯಬಹುದು ಎಂಬುದಾಗಿ ನುಡಿದಿದ್ದಾರೆ.

ನಾನು ಯಾವುದೇ ಮೆಡಿಕಲ್ ಪ್ರಮಾಣ ಪತ್ರವನ್ನು ಹಣ ಕೊಟ್ಟು ಪಡೆದುಕೊಂಡಿದ್ದು ಇರುವುದಿಲ್ಲ. ಎದುರುದಾರನಿಗೆ ಆರೋಗ್ಯ ಸಮಸ್ಯೆ ಇದ್ದಿದ್ದರಿಂದ, ಯಾವುದೇ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಎದುರುದಾರನು ಈಗಲೂ ಮನೆಯಲ್ಲಿ ವರ್ಕ ಫ್ರಾಮ ಹೋಮ್ ಮಾಡುತ್ತಾನೆ ಎಂಬ ಬಗ್ಗೆ ಯಾವುದೇ ದಾಖಲೆ ನಮ್ಮ ಹತ್ತಿರ ಇರುವುದಿಲ್ಲ. ಎದುರುದಾರನ ಕಂಪನಿಗೆ ನಾನು ದಾಖಲೆಯನ್ನು ತೆಗೆದುಕೊಳ್ಳಲು ನೋಟಿಸ್ಸನ್ನು ನೀಡಿದ್ದೇನೆ, ಆದರೆ ಕಂಪನಿಯವರು ಅದಕ್ಕೆ ಯಾವುದೇ ರೀತಿಯ ರೆಸಪಾನ್ಸ ಮಾಡಿದ್ದು ಇರುವುದಿಲ್ಲ. ಸದರಿ ನೋಟಿಸ್ಸನ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಾನು ಈ ಹಿಂದೆ ಶಾಲೆಯಲ್ಲಿ ಪಾರ್ಟ ಟೈಮ ಕೆಲಸವನ್ನು ಮಾಡುತ್ತಿದ್ದೆನು , ಆದರೆ ಸ್ಪಷ್ಟವಾಗಿ ಅದನ್ನು ಮುಂದುವರಿಸಿದ್ದು ಇರುವುದಿಲ್ಲ. ಆದರೆ ಶಾಲೆಯವರು ಕೆಲಸವಿದ್ದಾಗ , ನನ್ನನ್ನು ಕರೆಯುತ್ತಿದ್ದರು, ನಾನು ಆ ಸಂದರ್ಭದಲ್ಲಿ ಹೋಗುತ್ತಿದ್ದೆನು. ನಾನು ಎಷ್ಟು ದಿನ ಕೆಲಸ ಮಾಡಿದ್ದೆನು ಎಂಬುದನ್ನು ನನಗೆ ಈಗ ಹೇಳಲು ಆಗುವುದಿಲ್ಲ. ನಾನು ಅಲ್ಲಿ ಕಂಪ್ಯೂಟರ್ ಕೆಲಸವನ್ನು ಮಾಡುತ್ತಿದ್ದೆನು. ನಾನು ಈಗ ಶಾಲೆಯಲ್ಲಿ ಯಾವುದೇ ಕೆಲಸವನ್ನು ಮಾಡುತ್ತಿಲ್ಲ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆ ಸಂದರ್ಭದಲ್ಲಿ ಶಾಲೆಯಲ್ಲಿ ನನಗೆ ಒಂದು ದಿನಕ್ಕೆ 200/- ಹಣವನ್ನು ನೀಡುತ್ತಿದ್ದರು. ನಾನು ಶಾಲೆಯಿಂದ ಒಟ್ಟು ಎಷ್ಟು ಆದಾಯವನ್ನು ಪಡೆದಿದ್ದೇನೆ ಎಂಬುದನ್ನು ನನಗೆ ಈಗ ಹೇಳಲು ಆಗುವುದಿಲ್ಲ. ನಾನು ಈಗಲೂ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಎದುರುದಾರನ ಪರ ವಕೀಲರು ಇನ್ ಕ್ಯಾಮರಾ ಪ್ರೋಸಿಡಿಂಗ್ಸಗೆ ಅವಕಾಶ ಕೋರಿದ್ದರಿಂದ , ಅವಕಾಶ ನೀಡಲಾಯಿತು. )**

ನಾನು ನನ್ನ ಗಂಡನ ಜೊತೆ ವಾಸವಿದ್ದಾಗ ಅವರ ಮೊಬೈಲನ್ನು ಪರಿಶೀಲಿಸಿದ್ದು ಇರುವುದಿಲ್ಲ , ಅದರಂತೆ ನನ್ನ ಗಂಡನು ಸಹ ನನ್ನ ಮೊಬೈಲನ್ನು ನೋಡುತ್ತಿರಲಿಲ್ಲ. ಸುರೇಶ ಡಯಾಸ ರವರ ಪರಿಚಯ ನನಗಿದೆ. ನಾನು ಹುಟ್ಟಿದಾಗಿನಿಂದಲು ಅವರ ಪರಿಚಯವಿದ್ದು , ಅವರು ನನಗೆ ಸಂಬಂಧಿಕರಾಗಬೇಕು. ಸುರೇಶ ಡಯಾಸ ರವರ ತಂದೆ

ಹಾಗೂ ನನ್ನ ಅಜ್ಜಿ , ಅಣ್ಣ ಮತ್ತು ತಂಗಿಯಾಗುತ್ತಾರೆ. ನನ್ನ ತಂದೆಯ ಅಣ್ಣನ ಹೆಸರು ಬಸ್ತ್ಯಾಂವ ಹಾಗೂ ಜೂಜೆ ಆಗಿರುತ್ತದೆ.

ಸುರೇಶ ಡಯಾಸ ರವರ ಮನೆಯು ಕೋಡಾಣಿಯಲ್ಲಿದೆ. ದಿನಾಂಕಃ 26.01.2021 ರಂದು ನನ್ನ ಮತ್ತು ಎದುರುದಾರನ ಸಂಸಾರವನ್ನು ಸರಿ ಮಾಡಬೇಕೆಂಬುದಾಗಿ ಸಭೆ ಸೇರಿದ್ದರು ಎಂದಾಗ, ಸಾಕ್ಷಿಯು ಮದುವೆಯನ್ನು ರದ್ದು ಮಾಡಬೇಕೆಂಬುದಾಗಿ ಸಭೆ ಸೇರಿದ್ದರು ಎಂಬುದಾಗಿ ನುಡಿದಿದ್ದಾರೆ. ಆ ಸಭೆಯಲ್ಲಿ ನನ್ನ ತಂದೆ, ಹಾಗೂ ಸಹೋದರ ಸ್ಟೀಟನ್ ಇದ್ದನು. ನಾನು ಮೊಬೈಲನಲ್ಲಿ ಹೆಚ್ಚು ಕಾಲ ಕಳೆಯುತ್ತಿದ್ದೆನು ಎಂದು ಸದರಿ ಸಭೆಯಲ್ಲಿ ಚರ್ಚೆಯಾಗಿತ್ತು ಎಂದರೆ ಸರಿಯಲ್ಲ. ಸುರೇಶ ಡಯಾಸ ರವರು ಆ ಸಂದರ್ಭದಲ್ಲಿ ಇಸ್ರೇಲನಲ್ಲಿ ಇದ್ದರು , ಈಗ ಇಲ್ಲಿಯೇ ವಾಸವಾಗಿದ್ದಾರೆ.

ನನ್ನ ಗಂಡನು ನಾನು ಯಾವಾಗಲೂ ಸುರೇಶ ಡಯಾಸ ರವರ ಜೊತೆ ಚಾಟಿಂಗ್ ಮಾಡುತ್ತಿದ್ದು , ನನಗೂ ಹಾಗೂ ಆತನಿಗೆ ಸಂಬಂಧ ಇದೆ ಎಂದು ಆ ಸಭೆಯಲ್ಲಿ ಹೇಳಿದ್ದನು ಎಂದಾಗ, ಸಾಕ್ಷಿಯು ನನ್ನ ಹಾಗೂ ಆತನ ನಡುವೆ ತಂದೆ ಹಾಗೂ ಮಗಳ ಸಂಬಂಧವಿದೆ ಎಂಬುದಾಗಿ ನುಡಿದಿದ್ದಾರೆ. ಸುರೇಶ ಡಯಾಸ ರವರಿಗೆ ಅಂದಾಜು 65 ವಯಸ್ಸು ಇರಬಹುದು. ಸುರೇಶ ಡಯಾಸ ರವರು ನನಗೆ ಚಿನ್ನದ ಸರವನ್ನು ಉಡುಗರೆಯಾಗಿ ಕೊಟ್ಟಿದ್ದು ಇರುವುದಿಲ್ಲ. ಸುರೇಶ ಡಯಾಸ ರವರು ಮಣಿಗ್ರಾಮ ಮುಖಾಂತರ ನನಗೆ ಹಣವನ್ನು ಕಳುಹಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಇಸ್ರೇಲನಲ್ಲಿದ್ದಾಗ, ಸುರೇಶ ಡಯಾಸನು ಸಹ ಇಸ್ರೇಲನಲ್ಲಿದ್ದನು. ನಾನು ಜೇರುಸಿಲಂನಲ್ಲಿದ್ದೆನು, ಹಾಗೂ ಸುರೇಶ ಡಯಾಸ್ ರವರು ಡೆಲಾವಿವಾದಲ್ಲಿ ವಾಸವಿದ್ದರು. ನಾನು 1 1/2 ವರ್ಷ ಇಸ್ರೇಲನಲ್ಲಿದ್ದೆನು. ನಾನು ಸೆಂಟ್ ಜಾನ್ ಆಸ್ಪತ್ರೆಯಿಂದ ದಾಖಲೆಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವಾಗಲೂ ತಡರಾತ್ರಿಯವರೆಗೆ ಸುರೇಶ ಡಯಾಸ ರವರ ಜೊತೆ ಚಾಟ್ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ನಾನು ವಿನಾಃ ಕಾರಣ ಎದುರುದಾರನ ವಿರುದ್ಧ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಎದುರುದಾರನ ಜೊತೆ ಸಂಸಾರ ಮಾಡಲು ಎದುರುದಾರನು ಮಾನ್ಯ ನ್ಯಾಯಾಲಯದಿಂದ ಆದೇಶವನ್ನು ಪಡೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ , ಹಾಗೂ ನಾನು ಉದ್ದೇಶಪೂರ್ವಕವಾಗಿ ಅವನ ಜೊತೆ ಹೋಗಿಲ್ಲ ಎಂದರೆ ಸರಿಯಲ್ಲ. ಎದುರುದಾರನು ಚರ್ಚನಲ್ಲಿ ಡೈವೂರ್ಸ ಅರ್ಜಿಯನ್ನು ಸಲ್ಲಿಸಿದ್ದಾನೆ. ನಾನು ಚರ್ಚನಲ್ಲಿ ಮೌಖಿಕವಾಗಿ ಆತನ ಜೊತೆ ಸಂಸಾರ ಮಾಡಲು ತಯಾರು ಇಲ್ಲ ಎಂಬುದಾಗಿ ಹೇಳಿದ್ದೆನು. ನಾವು ಒಟ್ಟಾರೆಯಾಗಿ ಇರುವಂತೆ ಯಾವುದೇ ಲೆಟರ ಬಂದಿದ್ದು ಇರುವುದಿಲ್ಲ. ಎದುರುದಾರನು ನನ್ನ ಜೊತೆ ಸಂಸಾರ ಮಾಡಲು ತಯಾರಿದ್ದಾನೆ ಎಂದು ನನಗೆ ಲೆಟರ ಬಂದಿತ್ತು ಎಂದರೆ ಸರಿಯಲ್ಲ. ನಾನು ಸುರೇಶ ಡಯಾಸ ರವರ ಜೊತೆ ಅನ್ಯೂನ್ಯವಾಗಿದ್ದರಿಂದ, ಎದುರುದಾರನನ್ನು ಬಿಟ್ಟು ಬಂದು ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಉದ್ದೇಶಪೂರಕವಾಗಿ ಎದುರುದಾರನನ್ನು ಬಿಟ್ಟು ಬಂದಿದ್ದರಿಂದ, ಜೀವನಾಂಶವನ್ನು ಪಡೆಯಲು ಭಾಧ್ಯಸ್ಥಳಲ್ಲ ಎಂದರೆ ಸರಿಯಲ್ಲ. ನಾನು ನೀಡಿದಂತಹ ನೋಟಿಸಗೆ ಎದುರುದಾರನು ತನ್ನ ವಕೀಲರ ಮೂಲಕ ಪ್ರತ್ಯುತ್ತರವನ್ನು ನೀಡಿದ್ದಾನೆ ಎಂದರೆ ಸರಿಯಲ್ಲ. ನಾನು ಸದರಿ ಸಂಗತಿಗಳನ್ನು ಓದಿ ನೋಡಿದ್ದೇನೆ. ನಾನು ಬೆಂಗಳೂರಿನಲ್ಲಿ ಪ್ರಕರಣದಲ್ಲಿ ಹಾಜರಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು,ನನಗೆ ಹಣದ ತೊಂದರೆ ಇತ್ತು ಎಂಬುದಾಗಿ ನುಡಿದಿದ್ದಾರೆ.

ನಾನು 6-7 ವರ್ಷಗಳಿಂದ ಶಿಕ್ಷಕಿಯಾಗಿ ಕೆಲಸ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮದುವೆಯ ಪೂರ್ವದಲ್ಲಿ ನನ್ನ ಧರ್ಮದ ಪ್ರಕಾರ ನನ್ನಾ ಆಗಿದ್ದು ಇರುವುದಿಲ್ಲ, ಆದರೆ ನನಗೆ ಸಾರಿಯನ್ನು ಮಾತ್ರ ಕೊಟ್ಟಿದ್ದರು

ಎಂಬುದಾಗಿ ನುಡಿದಿದ್ದಾರೆ. ಸದರಿ ಫೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ , ಅದನ್ನು ನಿಶಾನೆ.ಅರ್–1 ಎಂದು ಗುರುತಿಸಲಾಯಿತು. ಸಾಕ್ಷಿಯ ಮುಂದೆ ಟೆಕ್ಸಟ ಮೆಸೇಜನ ಪ್ರತಿಯನ್ನು ತೋರಿಸಿದಾಗ , ಸಾಕ್ಷಿಯು ಅದನ್ನು ನೋಡಿ 1 ಮತ್ತು 2 ನೇ ಪುಟಗಳನ್ನು ನೋಡಿ ಗುರುತಿಸಿದ್ದರಿಂದ , ಅದನ್ನು ನಿಶಾನೆ ಆರ್–2 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಇನ್ನುಳಿದ 3–7 ನೇ ಪುಟಗಳನ್ನು ಎಡಿಟ್ ಮಾಡಿ ಹಾಜರುಪಡಿಸಿದ್ದಾರೆ ಎಂಬುದಾಗಿ ನುಡಿದಿದ್ದಾರೆ.

ದಿನಾಂಕಃ 19.02.2021 ರಂದು ಕಾರವಾರದ ಡೈಕೋಸಸರವರು ಮದುವೆಯನ್ನು ರದ್ದು ಮಾಡಲು ತಮಗೆ ಯಾವುದೇ ರೀತಿಯ ಹಕ್ಕಿಲ್ಲ ಎಂಬುದಾಗಿ ಹೇಳಿದ್ದರು ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ.

ನಾನು ನಿಶಾನೆ ಆರ್–2 ನ ಜೊತೆ ಹಾಜರುಪಡಿಸಿರುವ 3 ರಿಂದ 7 ನೇ ಪುಟಗಳನ್ನು ನೋಡಿ ಮೊದಲು ಒಪ್ಪಿಕೊಂಡಿದ್ದೆನು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/–

C/c. ಪ್ರಧಾನ ಪ್ರ ದ ನ್ಯಾದಂ ,ಹೊನ್ನಾವರ.